# ಕಮ್ಲೂ ಮಗ ಫಾರಿನ್ ರಿಟರ್ನ್ಡ್



**ಅಮೆರಿಕದಿಂದ ಬಂದ ಮಗ ಅಲ್ಲಿನ ಅಭ್ಯಾಸಗಳನ್ನೂ ಮೈಗೂಡಿಸಿಕೊಂಡು ಬಂದದ್ದನ್ನು ಅರಗಿಸಿಕೊಳ್ಳುವುದು ಕಮ್ಲೂಗೆ ಕಷ್ಟವಾಯಿತು. ಅಮ್ಮ ಎನ್ನುತ್ತಿದ್ದವನು ‘ಮಾಮ್’ ಎನ್ನತೊಡಗಿದಾಗ ತಾಯಿಕರುಳು ಚುರ್ರೆನ್ನದಿದ್ದೀತೆ?**

**ವೈ.ಕೆ. ಸಂಧ್ಯಾ ಶರ್ಮ**

ಕಲೆ: ಸಂತೋಷ್ ಸಸಿಹಿತ್ಲು

ಕೊರಳನ್ನು ಒಂಟೆಯಂತೆ ಉದ್ದಕ್ಕೆ ಚಾಚೀ ಚಾಚೀ ಕಮ್ಲೂ ಕುತ್ತಿಗೆ ಒಂದೇ ಸಮನೆ ನೋಯತೊಡಗಿತ್ತು. ಏರ್‌ಪೋರ್ಟಿನ ವಿಶಾಲ ಪ್ರಾಂಗಣದಿಂದ ಜನ ದುಬುದುಬು ಹೊರಗೆ ಉಕ್ಕಿ ಹೊರಬರುತ್ತಲೇ ಇದ್ದಾರೆ!

ಶ್ರೀಕಂಠೂ ಕೂಡ ಹದ್ದಿನಂತೆ ತನ್ನ ಚೂಪುನೋಟವನ್ನು ಅತ್ತಿತ್ತ ವಾಲಾಡಿಸುತ್ತಿದ್ದ. ಆದರೆ ಆ ಗುಂಪಿನಲ್ಲಿ ಅವರ ಮಗರಾಯ ಮಾತ್ರ ಪತ್ತೇನೇ ಇಲ್ಲ! ಕಮ್ಲೂ ಆತಂಕದಿಂದ ಏರ್‌ಪೋರ್ಟಿನ ಒಳಭಾಗದ ಎಲ್ಲ ದಿಕ್ಕಿನಲ್ಲೂ ಮೂಲೆಮೂಲೆಗಳನ್ನೂ ಸೋಸಿ ನೋಡಿದಳು... ಉಹೂಂ...

ಖುಷಿಯಿಂದ ಹೊರದ್ವಾರದಿಂದ ಚಿಮ್ಮುತ್ತ, ತನ್ನ ಕಡೆ ಹಾರಿಕೊಂಡು ಬರ್ತಾನೆ ಅಂತ ನಿರೀಕ್ಷಿಸಿದ್ದ ಅವರ ಅಮೆರಿಕ ರಿಟರ್ನ್ಡ್ ಮಗ ಮಾತ್ರ ನಾಪತ್ತೆ! ನಿರಾಸೆಯಿಂದ ಮುಖ ಜೋಲಾಯ್ತು.

ಗಾಜಿನ ಮಹಾದ್ವಾರದ ಬಳಿ ನಿಂತಿದ್ದ ಸೆಕ್ಯುರಿಟಿ ಬಳಿ ಧಾವಿಸಿ ಎರಡೆರಡು ಸಲ ಕನ್ಫರ್ಮ್ ಮಾಡಿಕೊಂಡಿದ್ದಳು ಆಗ ಲ್ಯಾಂಡ್ ಆಗಿದ್ದು ವಾಷಿಂಗ್ಟನ್ ವಿಮಾನಾನಾ ಅಂತ. ಅವನು ಕೊಂಚ ರೇಗಿಕೊಂಡೇ ಉತ್ತರಿಸಿದ್ದ.

‘ಬಂದಾಗಲೇ ಅರ್ಧ ಗಂಟೆಯಾಯ್ತಲ್ಲ...’

‘ಇದೆಂಥ ಅವಸರಾನೇ ನಿಂದು, ಅತಿಯಾಯ್ತು... ಚೆಕ್ಕಿಂಗ್ ಮಾಡ್ಕೊಂಡು ಲಗೇಜ್ ತೊಗೊಂಡು ಬರಬೇಡವೇ? ಇದೇನು ನಿಮ್ಮಪ್ಪನೂರು ತಿಪ್ಪಗಾನಹಳ್ಳಿಯೇ, ಮನೆಮುಂದೆ ಬಸ್ಸು ಬಂದು ನಿಂತ್ಕೊಳಕ್ಕೆ’ ಅಂತ ಶ್ರೀಕಂಠೂ ಗೊಣಗಿದಾಗ ಕಮ್ಲೂ ವಿಧಿ ಇಲ್ಲದೆ ತುಟಿ ಹೊಲಿದುಕೊಂಡಳು.

ಗಂಡ–ಹೆಂಡ್ತಿ ಇಬ್ಬರೂ ವಿಮಾನ ನಿಲ್ದಾಣದ ಹೊರದ್ವಾರದ ಬಳಿ ನಿಂತು ಗಂಟೆ ಕಳೆದಿತ್ತು. ನಾಲ್ಕು ವರ್ಷದಿಂದ ಕಾಣದ ಮಗನ ಮೋರೆ ನೋಡಲು ಹಂಬಲಿಸಿದ್ದರು. ಚಾತಕಪಕ್ಷಿಯಂತೆ ಕಾದುಕೊಂಡಿದ್ದಷ್ಟೇ ಬಂತು, ಮಗನ ಸುಳಿವೇ ಇಲ್ಲ!

ತಮ್ಮೆದುರೇ ಹಾದುಹೋದ ಜನಗಳು, ಲಗೇಜ್ ಎಳೆದುಕೊಂಡು ಹೋಗುತ್ತಿದ್ದ ಬಗೆಯನ್ನು, ಬೆನ್ನ ಮೇಲೆ ಅಕ್ಕಿಮೂಟೆಯಂಥ ಬ್ಯಾಕ್ ಪ್ಯಾಕ್ ಹೊತ್ತುಕೊಂಡ ವಿವಿಧ ಅವತಾರಗಳನ್ನೆಲ್ಲ ದಿಟ್ಟಿಸುವುದು ಅವಳಿಗೆ ಮನರಂಜನೆಯೆನಿಸಿತು.

ಇನ್ನೂ ಅರ್ಧಗಂಟೆ ಕಳೆಯಿತು... ಜನ ಖಾಲಿಯಾಗತೊಡಗಿದರು. ದಂಪತಿ ಮುಖ ಮುಖ ನೋಡಿಕೊಂಡರು ಬೆಪ್ಪಾಗಿ. ಹಿಂದಿನಿಂದ ಯಾವುದೋ ಪ್ರಾಣಿ ಗಕ್ಕನೆ ಅಪ್ಪಿ ಹಿಡಿದುಕೊಂಡಂತಾಗಿ ಕಮ್ಲೂ ಉಸಿರುಗಟ್ಟಿತು.

‘ಮಾಮ್... ಡ್ಯಾಡ್...’

ರೊಯ್ಯನೆ ತಿರುಗಿ ನೋಡಿದಳು. ಗುರುತು ಹತ್ತಲಿಲ್ಲ.

ತಲೆ ಮೇಲೆ ಮುಸುಕಿನ ಜೋಳದ ಬಣ್ಣದ, ಎದ್ದುನಿಂತ ಒರಟುಗೂದಲು... ಬಲಹುಬ್ಬಿನಿಂದ ನೇತಾಡುತ್ತಿದ್ದ ಪುಟಾಣಿ ರಿಂಗು, ಅದರೊಳಗೊಂದು ಬಣ್ಣದ ಮಣಿ. ಕಣ್ಣುಗಳನ್ನಾವರಿಸಿದ್ದ ಅಗಲಕಟ್ಟಿನ ಕನ್ನಡಕ!

ಗಾಬರಿಯಿಂದ ದೂರಸರಿದ ಅವಳ ದೃಷ್ಟಿ ಕೆಳಗೋಡಿತು.

ಎಣ್ಣೆಗಾಣದ ಕೂದಲ ಭಿಕ್ಷುಕನಂತೆ ಕಾಣುತ್ತಿದ್ದ ಅವನು, ತೊಟ್ಟ ಚಿಂದಿ ಬಟ್ಟೆಯ ಪ್ಯಾಂಟು, ತೊಡೆ,